ಕರ್ನಾಟಕ ಸರ್ಕಾರ

ಸಂಖ್ಯೆ:ಪಿಯು-1/ಅವಿಎ/ಅಉಕು/2016-17

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು-560012
ದಿನಾಂಕ 01 -09-2016.

ಜ್ಞಾಪನ

ವಿಷಯ: 2016-17ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶದ ಸಂಖ್ಯೆ: ಇಡಿ 72 ಎಸ್‌ಟಿಬಿ 2016 ದಿನಾಂಕ 04-07-2016.

* * * *

ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ 1130 ಉಪನ್ಯಾಸಕ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲಾಗಿದೆ. ಸರ್ಕಾರವು 2016-17ನೇ ಸಾಲಿನಲ್ಲಿ 1130 ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಆ ಮಿತಿಗೆ ಒಳಪಟ್ಟಂತೆ ರಾಜ್ಯದ ವಿವಿಧ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾವಾರು ಈ ಕೆಳಗಿನಂತೆ ನಿಗದಿಪಡಿಸಿದೆ. ಈ ಕೆಳಗೆ ನಿಗದಿಪಡಿಸಿದ ಸಂಖ್ಯೆಯ ಮಿತಿಯೊಳಗೆ ಉಲ್ಲೇಖದ ಆದೇಶದಲ್ಲಿ ನಮೂದಿಸಿರುವ ನಿಬಂಧನೆಗಳಿಗೆ ಒಳಪಟ್ಟು ನಿಯಮಾನುಸಾರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾ ಉಪ ನಿರ್ದೇಶಕರಿಗೆ ಸೂಚಿಸಿದೆ. ಉಳಿದಂತೆ ಸರ್ಕಾರದ ಅನುಮತಿಯ ನಂತರ ಹೆಚ್ಚುವರಿ ನೇಮಕಾತಿಗಳಿಗೆ ಅನುಮತಿಸಲಾಗುವುದು.

| ಕ್ರ. ಸಂ | ಜಿಲ್ಲೆಗಳ ಹೆಸರು | ನೇಮಕಾತಿ ಮಾಡಿಕೊಳ್ಳಬೇಕಾದ ಅತಿಥಿ ಉಪನ್ಯಾಸಕರುಗಳ ಸಂಖ್ಯೆ |
|---|---|---|
| 1. | ಬೆಂಗಳೂರು(ಉ) | 03 |
| 2. | ಬೆಂಗಳೂರು(ದ) | 06 |
| 3. | ಬೆಂಗಳೂರು (ಗ್ರಾ) | 04 |
| 4. | ರಾಮನಗರ | 10 |
| 5. | ಬಳ್ಳಾರಿ | 25 |
| 6. | ಬೆಳಗಾವಿ | 75 |
| 7. | ವಿಜಯಪುರ | 30 |
| 8. | ಬಾಗಲಕೋಟೆ | 35 |
| 9. | ಬೀದರ್ | 30 |
| 10. | ಚಿತ್ರದುರ್ಗ | 10 |
| 11. | ದಾವಣಗೆರೆ | 10 |
| 12. | ಚಿಕ್ಕಮಗಳೂರು | 40 |
| 13. | ಧಾರವಾಡ | 10 |
| 14. | ಗದಗ | 50 |
| 15. | ಹಾವೇರಿ | 25 |
| 16. | ಕಲಬುರಗಿ | 70 |

| | | |
|---|---|---|
| 17. | ಯಾದಗಿರಿ | 60 |
| 18. | ಹಾಸನ | 65 |
| 19. | ಕೋಲಾರ | 40 |
| 20. | ಚಿಕ್ಕಬಳ್ಳಾಪುರ | 40 |
| 21. | ಮೈಸೂರು | 45 |
| 22. | ಚಾಮರಾಜನಗರ | 20 |
| 23. | ಮಂಡ್ಯ | 25 |
| 24. | ಉತ್ತರ ಕನ್ನಡ | 50 |
| 25. | ರಾಯಚೂರು | 100 |
| 26. | ಕೊಪ್ಪಳ | 50 |
| 27. | ದಕ್ಷಿಣ ಕನ್ನಡ | 60 |
| 28. | ಉಡುಪಿ | 30 |
| 29. | ಶಿವಮೊಗ್ಗ | 25 |
| 30. | ತುಮಕೂರು | 64 |
| 31. | ಕೊಡಗು | 23 |
| **ಒಟ್ಟು** | | **1130** |

1/9/16

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಉಪ ನಿರ್ದೇಶಕರುಗಳಿಗೆ–ಮುಂದಿನ ಕ್ರಮಕ್ಕಾಗಿ.
2. ಇ–ಆಡಳಿತ ಶಾಖೆ–ಅಂತರ್ಜಾಲದಲ್ಲಿ ಪ್ರಕಟಿಸಲು.
3. ಕಚೇರಿ ಪ್ರತಿ.